lift irrigation projectಗಳಿಗೆ power connection ಕೊಡಲಾಗಿಲ್ಲ. ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದು ಈಗಾಗಲೇ ಟೆಂಡರ್ ಸಹಾ ಕರೆದಿದ್ದಾರೆ. ಆದರೆ, ಗುತ್ತಿಗೆದಾರರು ತಮಗೆ ಎಲ್ಲಿ ಲಾಭವಾಗುತ್ತದೋ, ತಮಗೆ ಎಲ್ಲಿ ದುಡ್ಡು ಬರುತ್ತದೋ ಅಷ್ಟು portion ಅನ್ನು ಮಾತ್ರ ಮುಗಿಸಿ, ಉಳಿದಂಥ ಕೆಲಸಗಳನ್ನು ಅಂದರೆ power connection ಕೊಡತಕ್ಕಂಥಾದ್ದಾಗಲಿ, machinery fix ಮಾಡತಕ್ಕಂಥ ಕೆಲಸವನ್ನಾಗಲೀ ಮಾಡುವುದಿಲ್ಲ. ಈ ರೀತಿಯಾಗಿ ಅವರು ಮಾಡುವುದರಿಂದ, ಯೋಜನೆಗಳಿಗೆ ನಬಾರ್ಡ್ ನಿಂದ ಹಣ ಪಡೆದರೂ ಸಹ 2 ವರ್ಷ, 3 ವರ್ಷ ವಿಳಂಬವಾಗುತ್ತಿದ್ದು, ಕಾಮಗಾರಿಗಳು ಸಕಾಲಕ್ಕೆ ಮುಕ್ತಾಯಗೊಳ್ಳದೇ ರೈತರಿಗೆ ಉಪಯೋಗವಾಗುತ್ತಿಲ್ಲ. ಹಾಗಾಗಿ, ತಾವು ದಯವಿಟ್ಟು ರಾಯಚೂರು ಜಿಲ್ಲೆಯ lift irrigation ಯೋಜನೆಗಳ ಬಗ್ಗೆ, ಈ ಅಧಿವೇಶನ ಮುಗಿಯುವುದರೊಳಗಾಗಿ ಜನಪ್ರತಿನಿಧಿಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ತಾವು review ಮಾಡಿದರೆ ನಮಗೆ ಹೆಚ್ಚಿನ ಅನುಕೂಲವಾಗಬಹುದು ಎಂದು ಮಾನ್ಯ ಅಧ್ಯಕ್ಷರ ಮೂಲಕ ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಣ್ಣ ನೀರಾವರಿ ಇಲಾಖೆಗೆ ಸಂಬಂಧಪಟ್ಟ ಯಾವುದೇ lift irrigation ಇರಬಹುದು, ಆ ಬಗ್ಗೆ ನಾವು ಈಗಾಗಲೇ ಗಮನ ಕೊಡುತ್ತಿದ್ದೇವೆ. ಏನು ಕ್ರಮ ತೆಗೆದುಕೊಂಡಿದ್ದೇವೆ. ಎನ್ನುವಂಥಾದ್ದನ್ನು ನಿಮ್ಮ ಗಮನಕ್ಕೆ ತರುವಂಥ ಪ್ರಯತ್ನವನ್ನು ನಾನು ಮಾಡುತ್ತೇನೆ. ಮತ್ತೊಮ್ಮೆ ಅಧಿಕಾರಿಗಳನ್ನು ಕರೆದು, ಸಮಾಲೋಚನೆ ಮಾಡಿ ಅತಿ ಶ್ರೀಘ್ರದಲ್ಲಿಯೇ ಕಾಮಗಾರಿಯನ್ನು ಪೂರ್ಣ ಮಾಡುವುದಕ್ಕೆ ನಾನು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ.

ಪ್ರಶ್ನೆ ಸಂಖ್ಯೆ 781:

ಅಧ್ಯಕ್ಷರು: ಶಿವಶಂಕರ್‌ರೆಡ್ಡಿಯವರ ಪ್ರಶ್ನೆ ಸಣ್ಣ ನೀರಾವರಿ ಇಲಾಖೆಯಿಂದ ಜಲ ಸಂಪನ್ಮೂಲ ಇಲಾಖೆಗೆ ವರ್ಗವಾಗಿದೆ. ಅದರ ಬಗ್ಗೆ ನಿಮಗೆ ಈಶ್ವರಪ್ಪನವರಿಂದ ಮುಂದಿನ ಸಾರಿ ಉತ್ತರ ಕೊಡಿಸುತ್ತೇನೆ.

767. **ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):–** ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯದಲ್ಲಿರುವ ಪ್ರಾಣಿ ಸಂಗ್ರಹಾಲಯಗಳು ಎಷ್ಟು;

(ಆ) ಈ ಸಂಗ್ರಹಾಲಯದಲ್ಲಿರುವ ಪ್ರಾಣಿಗಳ ಸಂಖ್ಯೆ ಎಷ್ಟು;

(ಇ) ಪ್ರಾಣಿಗಳಿಗೆ ಸರಿಯಾದ ರೀತಿಯಲ್ಲಿ ಆಹಾರವನ್ನು ಒದಗಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಬೇರೆ ಬೇರೆ ಪ್ರದೇಶಗಳಲ್ಲಿ ಹೊಸ ಪ್ರಾಣಿಯನ್ನು ಪ್ರಾಣಿ ಸಂಗ್ರಹಾಲಯಕ್ಕೆ ತರಿಸಿಕೊಳ್ಳುವ ಯೋಜನೆ ಸರ್ಕಾರಕ್ಕಿದೆಯೇ?

ಶ್ರೀ ಸಿ. ಚೆನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):-

(ಅ) ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ಮೃಗಾಲಯ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕೇಂದ್ರ ಮೃಗಾಲಯ ಪ್ರಾಧಿಕಾರದಿಂದ ಮನ್ನಣೆಗೊಂಡ 8 ಪ್ರಾಣಿ ಸಂಗ್ರಹಾಲಯಗಳು ಇರುತ್ತವೆ. ಇಲಾಖೆಯ ವಿವಿಧ ವೃತ್ತಗಳಡಿಯಲ್ಲಿ ಒಟ್ಟು 5 ಮಿನಿ ಪ್ರಾಣಿ ಸಂಗ್ರಹಾಲಯಗಳು ಸ್ಥಾಪಿತಗೊಂಡಿರುತ್ತವೆ. ಹೀಗಾಗಿ ಒಟ್ಟು 13 ಪ್ರಾಣಿ ಸಂಗ್ರಹಾಲಯಗಳು ಇರುತ್ತವೆ.

(ಆ) ಕರ್ನಾಟಕ ಮೃಗಾಲಯ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಪ್ರಾಣಿ ಸಂಗ್ರಹಾಲಯಗಳಲ್ಲಿರುವ ಪ್ರಾಣಿ ಪಕ್ಷಿಗಳ ವಿವರ ಈ ಕೆಳಗಿನಂತಿದೆ.

ಸಸ್ತನಿಗಳು	–	1610
ಪಕ್ಷಿಗಳು	–	1207
ಉರಗಗಳು	–	609
ಒಟ್ಟು	–	3426

ಇತರೆ ಪ್ರಾಣಿ ಸಂಗ್ರಹಾಲಯಗಳಲ್ಲಿ ಇರುವ ಪ್ರಾಣಿಗಳ ಸಂಖ್ಯೆ ಈ ರೀತಿ ಇರುತ್ತವೆ.

ಕ್ರ.ಸಂ.	ಪ್ರಾಣಿ ಸಂಗ್ರಹಾಲಯದ ಹೆಸರು	ಸಂಖ್ಯೆ
1.	ಡಾ॥ ಶಿವರಾಂ ಕಾರಂತ್ ಬಯೋಲಾಜಿಕಲ್ ಪಾರ್ಕ್, ಮಂಗಳೂರು	293
2.	ಗೆಂಟೇಕಟ್ಟೆ ಪ್ರಾಣಿ ಸಂಗ್ರಹಾಲಯ, ಹಾಸನ	58
3.	ನಾಮದಚಿಲುಮೆ ಜಿಂಕೆವನ, ತುಮಕೂರು	35

4.	ಶ್ರೀಕ್ಷೇತ್ರ, ಸೋಗಲ ಸೋಮೇಶ್ವರ ಜಿಂಕೆವನ, ಗೋಕಾಕ್	90
5.	ಆನಗೋಡು ಪ್ರಾಣಿಸಂಗ್ರಹಾಲಯ, ಚಿತ್ರದುರ್ಗ	21
	ಒಟ್ಟು	497

ಮನ್ನಣೆಗೊಂಡ 8 ಪ್ರಾಣಿಸಂಗ್ರಹಾಲಯಗಳು ಹಾಗೂ ಇತರೆ ಪ್ರಾಣಿಸಂಗ್ರಹಾಲಯಗಳಲ್ಲಿರುವ ಒಟ್ಟು ಪ್ರಾಣಿಗಳ ಸಂಖ್ಯೆ 3426+497=3923

ಪ್ರಾಣಿ ಸಂಗ್ರಹಾಲಯಗಳಲ್ಲಿರುವ ಪ್ರಾಣಿಗಳಿಗೆ ಸರಿಯಾದ ರೀತಿಯಲ್ಲಿ ಆಹಾರವನ್ನು ಒದಗಿಸಲಾಗುತ್ತಿದೆ.

ಕರ್ನಾಟಕ ಮೃಗಾಲಯ ಪ್ರಾಧಿಕಾರದಡಿ ಬೇರೆ ಪ್ರದೇಶಗಳಿಂದ ಅಗತ್ಯಕ್ಕೆ ತಕ್ಕಂತೆ ಪ್ರಾಣಿಗಳನ್ನು ವಿನಿಮಯ ಮಾಡಿಕೊಳ್ಳುವ ಸಂಬಂಧ ಕೇಂದ್ರ ಮೃಗಾಲಯ ಪ್ರಾಧಿಕಾರಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದೆ.

1. ಮೈಸೂರು ಮೃಗಾಲಯದಿಂದ ಸಿಂಗಪೂರ್ ಮೃಗಾಲಯಕ್ಕೆ				ಸಿಂಗಪೂರ್ ಮೃಗಾಲಯದಿಂದ ಮೈಸೂರು ಮೃಗಾಲಯಕ್ಕೆ			
	ಗಂಡು	:	ಹೆಣ್ಣು		ಗಂಡು	:	ಹೆಣ್ಣು
ಸ್ಟಾಂಪ್ ಡೀರ್	1	:	1	ದಕ್ಷಿಣ ಆಫ್ರಿಕಾದ ವೈಲ್ಡ್ ಡಾಗ್	2	:	2
ಕೃಷ್ಣ ಮೃಗ	1	:	2				
2. ಮೈಸೂರು ಮೃಗಾಲಯರಿಂದ ಲಕ್ನೊ ಮೃಗಾಲಯಕ್ಕೆ				ಲಕ್ನೊ ಮೃಗಾಲಯದಿಂದ ಮೈಸೂರು ಮೃಗಾಲಯಕ್ಕೆ			
	ಗಂಡು	:	ಹೆಣ್ಣು		ಗಂಡು	:	ಹೆಣ್ಣು
ಚಿಂಪಾಂಜಿ	1	:	1	ಜೀಬ್ರಾ	1	:	1
ಲೇಡಿ ಆಮ್ ಹೆಸ್ಟ್ ಫಿಸೆಂಟ್	1	:	2	ಜಿರಾಫೆ	0	:	1
				ಸಾರಸ್ ಕ್ರೇನ್	2	:	0

ಪ್ರಶ್ನೆ ಸಂಖ್ಯೆ: 767 **(ಉತ್ತರವನ್ನು ಲಗತ್ತಿಸಲಾಗಿದೆ)**

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅರಣ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಸಸ್ತನಿಗಳು 1,610, ಪಕ್ಷಿಗಳು 1,207, ಉರಗಗಳು 609. ಹೀಗೆ ಒಟ್ಟು 3,426 ಪ್ರಾಣಿಗಳು ಈ ರಾಜ್ಯದ ಪ್ರಾಣಿ ಸಂಗ್ರಹಾಲಯಗಳಲ್ಲಿವೆ ಎಂದು ಹೇಳಿದ್ದಾರೆ. ಇದರಲ್ಲಿ ಯಾವಯಾವ ಜಾತಿಯ ಪ್ರಾಣಿಗಳಿವೆ ಎನ್ನುವುದನ್ನು ತಾವು ಹೇಳಬೇಕು.

ಶ್ರೀ ಸಿ. ಚೆನ್ನಿಗಪ್ಪ: ಸಸ್ತನಿಗಳು 1,610, ಪಕ್ಷಿಗಳು 1,207, ಉರಗಗಳು 609. ಒಟ್ಟು 3,426 ಪ್ರಾಣಿ ಮತ್ತು ಪಕ್ಷಿಗಳಿವೆ.

ಶ್ರೀ ವಾಟಾಳ್ ನಾಗರಾಜ್: ಒಟ್ಟು 3,426 ಪ್ರಾಣಿಗಳು ಎಂದು ಹೇಳಿದ್ದಾರೆ. ಈ 3,426 ಪ್ರಾಣಿಗಳು ಯಾವುವು ಎಂದು ಕೇಳಿದೆ. ಈ ವನ್ಯಮೃಗಗಳ್ಯಾವುವು? ಸಸ್ತನಿಗಳು ಎಂದರೆ ಏನು? ಸಸ್ತನಿಗಳು ಎನ್ನುವುದು ಯಾವ ಭಾಷೆ, ಇದು ಏನೆಂದು ನನಗೆ ಅರ್ಥವಾಗಿಲ್ಲ.

ಶ್ರೀ ಸಿ. ಚೆನ್ನಿಗಪ್ಪ: ಸಸ್ತನಿಗಳು ಎಂದರೆ ಎದೆ ಹಾಲನ್ನು ಕುಡಿಸತಕ್ಕಂಥ ಪ್ರಾಣಿಗಳು.

ಶ್ರೀ ವಾಟಾಳ್ ನಾಗರಾಜ್: ಪ್ರಾಣಿ ಸಂಗ್ರಹಾಲಯಗಳಲ್ಲಿಇದುವರೆಗೆ ಎಷ್ಟು ಪ್ರಾಣಿಗಳು ಸತ್ತಿವೆ? ಯಾವ್ಯಾವ ಪ್ರಾಣಿ ಸಂಗ್ರಹಾಲಯದಲ್ಲಿ ಎಷ್ಟೆಷ್ಟು ಪ್ರಾಣಿಗಳು ಸತ್ತಿವೆ?

ಶ್ರೀ ಸಿ. ಚೆನ್ನಿಗಪ್ಪ: ಅದರ ಬಗ್ಗೆ ತಾವು ಪ್ರಶ್ನೆಯನ್ನು ಕೇಳಿರಲಿಲ್ಲ. ಸತ್ತಿರುವ ಪ್ರಾಣಿಗಳ ಬಗ್ಗೆ ಕೇಳಿರಲಿಲ್ಲ. ಪ್ರಾಣಿ ಸಂಗ್ರಹಾಲಯಗಳಲ್ಲಿ ಎಷ್ಟು ಪ್ರಾಣಿಗಳವೆ ಎಂದು ಕೇಳಿದ್ದಿರಿ. ಒಟ್ಟು ಎಷ್ಟು ಪ್ರಾಣಿಗಳಿವೆ ಎಂದು ಹೇಳಿದ್ದೇನೆ. ಸತ್ತುಹೋಗಿರುವ ಪ್ರಾಣಿಗಳ ಬಗ್ಗೆ ಮುಂದೆ ಪ್ರಶ್ನೆಯನ್ನು ಕೇಳಿದಾಗ ನಾನು ಉತ್ತರವನ್ನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಸತ್ತಿರುವ ಪ್ರಾಣಿಗಳ ಬಗ್ಗೆ ತಮಗೆ ಗೊತ್ತಿಲ್ಲವೆಂದರೇನು? ಬದುಕಿರುವ ಪ್ರಾಣಿಗಳ ಬಗ್ಗೆ ತಾವು ಹೇಳುತ್ತಿದ್ದೀರಿ. ಸತ್ತಿರುವ ಪ್ರಾಣಿಗಳ ಬಗ್ಗೆ ನಾವು ಉಪ ಪ್ರಶ್ನೆಯನ್ನು ಕೇಳಲು ನಮಗೆ ಅವಕಾಶವಿದೆ. ದಯಮಾಡಿ, ಸತ್ತಿರುವ ಪ್ರಾಣಿಗಳು ಎಷ್ಟು ಎಂದು ಹೇಳಿ. ಎಲ್ಲವನ್ನು ಈಗ ಹೇಳುವುದಕ್ಕೆ ಆಗದಿದ್ದರೂ, ಕೇವಲ ಮೈಸೂರು ಪ್ರಾಣಿ ಸಂಗ್ರಹಾಲಯದಲ್ಲಿ ಸತ್ತಿರುವ ಪ್ರಾಣಿಗಳೆಷ್ಟು ಎನ್ನುವುದನ್ನಾದರೂ ಹೇಳಿ. ಮೈಸೂರಿನಲ್ಲಿ ಎಷ್ಟು ಪ್ರಾಣಿಗಳು ಸತ್ತಿವೆ? ಅದಕ್ಕೆ ಕಾರಣಗಳೇನು? ಎನ್ನುವುದನ್ನು ಹೇಳಬೇಕು.

ಶ್ರೀ ಸಿ. ಚೆನ್ನಿಗಪ್ಪ: ನಮ್ಮ ಹಿರಿಯ ನಾಯಕರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದೀರಿ. ಆದರೆ, ಅಂದಾಜಿನ ಮೇಲೆ ಹೇಳತಕ್ಕಂಥ ಸಭೆಯಲ್ಲ ಇದು. ನಿಖರವಾದ ಉತ್ತರವನ್ನು

ಹೇಳ ಬೇಕಾಗುತ್ತದೆ. ಅದಕ್ಕಾಗಿ, ತಾವು ಸಮಯಾವಕಾಶವನ್ನು ಕೊಟ್ಟರೆ ನಿಖರವಾದ ಉತ್ತರವನ್ನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:ಯಾವಯಾವ ಪ್ರಾಣಿ ಸಂಗ್ರಹಾಲಯದಲ್ಲಿ ಯಾವ್ಯಾವ ಪ್ರಾಣಿಗಳು ಸತ್ತಿವೆ ಎನ್ನುವ ಬಗ್ಗೆ ತಮಗೆ ಮಾಹಿತಿ ಇಲ್ಲವೆಂದರೆ ನನಗೆ ನೋವಾಗುತ್ತದೆ. ಮಾಹಿತಿ ಇಲ್ಲವೆಂದರೆ ಪರಿಸ್ಥತಿ ಏನು? ಸತ್ತಿರುವ ಪ್ರಾಣಿಗಳ ಬಗ್ಗೆ ಕೇಳುತ್ತಿದ್ದೇನೆ. ಹುಲಿಗಳೆಷ್ಟು ಸತ್ತಿವೆ? ಜಿಂಕೆಗಳೆಷ್ಟು ಸತ್ತಿವೆ? ಆನೆಗಳೆಷ್ಟು ಸತ್ತಿವೆ? ಇವುಗಳನ್ನು ನೀವು ಹೇಳಬೇಕಲ್ಲವೆ?

ಶ್ರೀ ಸಿ. ಚೆನ್ನಿಗಪ್ಪ: ಆ ಮಾಹಿತಿಯನ್ನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಹೋಗಲಿ, ಕನಿಷ್ಟ ಈ ಸಮ್ಮಿಶ್ರ ಸರ್ಕಾರದಲ್ಲಿ ಎಷ್ಟು ಪ್ರಾಣಿಗಳಿವೆ ಎನ್ನುವುದನ್ನಾದರೂ ಹೇಳಿ. ಅದೂ ಗೊತ್ತಿಲ್ಲವೇ ನಿಮಗೆ/ ಸಮ್ಮಿಶ್ರ ಸರ್ಕಾರದಲ್ಲಿ ಎರಡೂ ಪಕ್ಷದವರು ಸೇರಿ ನಿಮ್ಮ ಸರ್ಕಾರದ ಆಡಳಿತದಲ್ಲಿರತಕ್ಕಂಥ ಪ್ರಾಣಿಗಳ ಸಂಖ್ಯೆ ಎಷ್ಟು? ಅದನ್ನಾದರೂ ಹೇಳಿ ಹೋಗಲಿ. ಅದನ್ನೂ ಹೇಳುವುದಿಲ್ಲವೇ? ನಿಮ್ಮ ಹತ್ತಿರ ಆ ಅಂಕಿಅಂಶಗಳೂ ಇಲ್ಲವೆ?

ಅಧ್ಯಕ್ಷರು: ನಾಗರಾಜ್‌ರವರೆ, ಇಲ್ಲಿ ಈ ರೀತಿ ಕೇಳಿದರೆ ಹೇಗೆ. ಸಾಕು ದಯಮಾಡಿ ಕುಳಿತುಕೊಳ್ಳಿ.

590. **ಶ್ರೀ ಪಾಟೀಲ್ ಡಿ.ಆರ್**:– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ಹಣಕಾಸು ವರ್ಷಗಳಲ್ಲಿ ಡೀಸಲ್ , ಪೆಟ್ರೋಲ್, ಲೂಬ್ರಿಕೆಂಟ್ಸ್ ಸೇರಿದಂತೆ ಪೆಟ್ರೋಲಿಯಂ ಉತ್ಪನ್ನಗಳ ಮಾರಾಟದಿಂದ ರಾಜ್ಯದ ಬೊಕ್ಕಸಕ್ಕೆ ಸಂದಾಯವಾದ ಮಾರಾಟ ತೆರಿಗೆ ಮೊತ್ತ ಎಷ್ಟು?

(ಆ) ರಾಜ್ಯದ ಬೊಕ್ಕಸಕ್ಕೆ ಎಲ್ಲ ಮೂಲಗಳಿಂದ ಸಂಗ್ರಹವಾದ ಒಟ್ಟು ಮಾರಾಟ ತೆರಿಗೆ ಮೊತ್ತೆವೆಷ್ಟು?

(ಇ) ಪೆಟ್ರೋಲಿಯಂ ವಸ್ತುಗಳ ಮೇಲಿನ ಮಾರಾಟ ತೆರಿಗೆಯಿಂದ ಸಂಗ್ರಹವಾದ ರಾಜ್ಯದ ಮಾರಾಟ ತೆರಿಗೆಯಲ್ಲಿ ರಾಜ್ಯ ಸರ್ಕಾರ ಹೊಂದಿರುವ ಪಾಲು ಎಷ್ಟು?